‘ಹೌದೇ? ಆ ಹೊತ್ತಿನಲ್ಲಿ ಸಣ್ಣಮ್ಮೋರು ಮನೆಯಲ್ಲಿರಲಿಲ್ಲವೆ?’

‘ಇದ್ರು, ಆ ವ್ಯಕ್ತಿಗೆ ಚೆನ್ನಾಗಿ ಬೈದ್ರು ಜೊತೆಗೆ ರಾಯರು ಇಲ್ಲದ ಹೊತ್ತಿನಲ್ಲಿ ಬರಬಾರದೂಂತ ತಾಕೀತು ಮಾಡಿದ್ರು’

‘ಅದ್ಕೆ, ಅವನು ಏನಂದ?’

‘ಬಂದ್ರೆ ಏನ್ಮಾಡ್ತೀಯಾಂತ ಮರು ಪ್ರಶ್ನೆ ಹಾಕಿದ’

‘ಸಣ್ಣಮ್ಮೋರು ಏನಂದ್ರು?’

‘ಡ್ಯಾಡಿ ಇಲ್ಲದ ಸಮಯದಲ್ಲಿ ಬಂದ್ರೆ ಪೊಲೀಸ್ ಕಂಪ್ಲೇಂಟ್ ಕೊಡ್ತೀನಿ ಅಂದ್ರು’

‘ಆಮೇಲೆ...’

‘ಅದ್ಕೆ ಆಯಪ್ಪ ಭಯ ನಟಿಸ್ದ. ಕಾಶಮ್ಮನಿಗೂ ಚೆನ್ನಾಗಿ ಬೈದ. ಪದೇ ಪದೇ ಫೋನ್ ಮಾಡಿ ಕರೆಯೋದು ಬೇಡಾಂದ’

‘ಕಾಶಮ್ಮ ಏನೂ ಪ್ರತಿಕ್ರಿಯಿಸಲಿಲ್ಲವೆ?’

‘ಆಕೆ ಅಳೋದಿಕ್ಕೆ ಶುರು ಮಾಡಿದ್ರು. ಕೊನೆಗೆ ಅ ವ್ಯಕ್ತಿ ಸಮಾಧಾನ ಮಾಡಿ ಇಲ್ಲಿಂದ ಹೊರಟು ಹೋದ. ಅವನಿಂದಾಗಿ ಚಿಕ್ಕಮ್ಮೋರು ಊಟ ತಿಂಡೀನೂ ಬಿಟ್ಬಿಟ್ರು’ ರಾಮಸ್ವಾಮಿಯ ಮಾತನ್ನು ಕೇಳಿ ಕಿರಣ ಹೌಹಾರಿದ.

‘ಇದು ಯಾವಾಗ್ನಿಂದ?’ ಆಘಾತದ ಪ್ರಶ್ನೆ ಎಸೆದ.

‘ನಿನ್ನೆ ಸಂಜೆಯಿಂದ’

‘ಈಗ ಹೇಗಿದ್ದಾರೆ?’

‘ಸಾಹೇಬ್ರೆ, ಹುಚ್ಚು ಹಿಡಿದವರ ಹಾಗೆ ಆಡ್ತಿದ್ದಾರೆ. ಅವರನ್ನ ನೋಡಿಕೊಳ್ತಿರೋ ನಳಿನಿಗೆ ಭಯ ಶುರುವಾಗಿದೆ. ನೀರೂ ಕುಡಿಯುವುದಿಲ್ಲವಂತೆ’

ಕಿರಣ ದೀರ್ಘ ಆಲೋಚನೆಗೊಳಗಾದ. ತಾನು ಬಂದ ಸಮಯವೇ ಚೆನ್ನಾಗಿಲ್ಲವೆನಿಸಿತು. ಘಳಿಗೆ ಕೈ ಕೊಟ್ಟಿತು.

‘ನಾನು ಅವರನ್ನು ನೋಡ್ಬೇಕು. ಮಾತಾಡ್ಲಿಸ್ಬೇಕು, ಸಾಧ್ಯನಾ?’

‘ಗೊತ್ತಿಲ್ಲ ಸಾಹೇಬ್ರೆ, ನೀವೇ ತಿಳಿ ಹೇಳ್ಬೇಕು ಅವರಿಗೆ’ ನಿರಾಸೆ ತುಂಬಿತು ಕಿರಣನಿಗೆ. ಎದ್ದು ನಿಂತ. ರಾಮಸ್ವಾಮಿ ಪಕ್ಕಕ್ಕೆ ಸರಿದು ನಿಂತ.

ಕಿರಣ ಹಜಾರ ದಾಟಿ ಮೆಟ್ಟಿಲುಗಳನ್ನು ಬಳಸಿ ಮೇಲಂತಸ್ತಿಗೆ ತೆರಳಿದ. ಕಾಶಮ್ಮನ ಕೋಣೆಯ ಬಾಗಿಲು ಮುಚ್ಚಿಕೊಂಡಿತ್ತು. ನಿಧಾನವಾಗಿ ಬಾಗಿಲ ಮೇಲೆ ಬಡಿದ. ಕ್ಷೀಣ ಸ್ವರವೊಂದು ಕೇಳಿತು.

‘ಬಾ ಕಾಕುಟ್ಟ, ನಿನ್ನನ್ನೇ ಕಾಯ್ತಾ ಇದ್ದೀನಿ’ ಆ ಮಾತನ್ನು ಕೇಳಿ ಬಾಗಿಲನ್ನು ತೆರೆಯಲಿದ್ದ ಕಿರಣನ ಕೈ ತಟಸ್ಥವಾಯಿತು. ಕಾಶಮ್ಮನ ನಿರೀಕ್ಷೆಯಿರುವುದು ಕಾಕುಟ್ಟನ ಆಗಮನಕ್ಕೆ! ಈಗ ತನ್ನ ಪ್ರವೇಶವಾದರೆ ಕಾಶಮ್ಮನ ಪ್ರತಿಕ್ರಿಯೆ ಏನು? ಹಾಗೆ ನಿಂತಿದ್ದ ಕಿರಣ ಮೆಟ್ಟಿಲಿಳಿಯುವ ಆಲೋಚನೆಯಲ್ಲಿರುವಾಗ ಕಾಶಮ್ಮನ ಸಹಾಯಕಿ ನಳಿನಿ ಮೆಟ್ಟಿಲೇರಿ ಬರುವುದು ಕಂಡಿತು. ಕಿರಣ ಪಕ್ಕಕ್ಕೆ ಸರಿದು ಮುಗುಳ್ನಕ್ಕ.

‘ಇಲ್ಲೇ ನಿಂತಿದ್ದೀರಲ್ಲಾ, ಸಾಹೇಬ್ರೆ, ಒಳಗೆ ಬನ್ನಿ’ ಬಾಗಿಲು ತೆರೆದು ಒಳಗಡಿಯಿಟ್ಟಳು. ಕಿರಣ ಅನುಮಾನದಿಂದಲೇ ಒಳಗಡಿಯಿಟ್ಟ.

ಕಾಶಮ್ಮ ಹಾಸಿಗೆಯ ಮೇಲೆ ಮಲಗಿ ಕಿಟಕಿಯತ್ತ ದೃಷ್ಟಿ ಹಾಯಿಸಿರುವುದು ಕಂಡಿತು.

‘ಅಮ್ಮೋರೆ, ಯಾರು ಬಂದಿದ್ದಾರೆ ನೋಡಿ’ ನಳಿನಿ ಕಾಶಮ್ಮನ ಗಮನವನ್ನು ಕಿರಣನತ್ತ ಸೆಳೆಯುವ ಪ್ರಯತ್ನ ಮಾಡಿದಳು. ಕಾಶಮ್ಮ ದೃಷ್ಟಿ ಹೊರಳಿಸದೆ ಹೇಳಿದಳು.

‘ಕಾಕುಟ್ಟ, ನೀನು ಇವತ್ತು ಬರದಿರುತ್ತಿದ್ದರೆ ನಾನು ಸಾಯ್ತಿದ್ದೆ. ಎರಡು ದಿನದಿಂದಲೂ ಅನ್ನ ನೀರು ಬಿಟ್ಟು ಕುಳಿತಿದ್ದೇನೆ’ ನೀರಸ ದನಿ ಹೊರಟಿತು.

ಕಿರಣ ಅವರ ಮುಂದೆ ನಿಂತು ಮಂಚದ ಅಂಚನ್ನು ಹಿಡಿದು ತುಸು ಬಾಗಿ ಅವರ ಗಮನ ಸೆಳೆದ. ಎದುರಿಗೆ ನಿಂತಿದ್ದವನ್ನು ಗುರುತಿಸದಾದ ಹೆಂಗಸು ಕೈ ಮುಂದಕ್ಕೆ ಚಾಚಿತು. ಕಿರಣ ಕೈಯನ್ನು ಹಿಡಿದ. ಅನಿರೀಕ್ಷಿತ ಹಿಡಿತದಿಂದ ತಲ್ಲಣಿಸಿದ ಕಾಶಮ್ಮ ಕಣ್ಣು ಮುಚ್ಚಿ ನೀರ ಹನಿಯನ್ನು ಕೆನ್ನೆಯ ಮೇಲೆ ಉರುಳಿಸಿದರು.

‘ನಾನು ಕಾಕುಟ್ಟ ಅಲ್ಲ ಕಿರಣ...’ ಅವರಿಗೆ ಮಾತ್ರ ಕೇಳುವಂತೆ ನುಡಿದ. ಕಾಶಮ್ಮನ ಕೈ ನಡುಗಿತು. ಕಿರಣನಿಂದ ಬಿಡಿಸಿಕೊಂಡು ಕಣ್ಣು ಒರೆಸಿಕೊಂಡರು.

‘ನಾನಿನ್ನೂ ಬದುಕಿದ್ದೇನೋ ಇಲ್ಲವೋಂತ ನೋಡೋದಿಕ್ಕೆ ಬಂದಿಯೇನಪ್ಪಾ?’

‘ಮೊದಲು ನೀವು ಇದನ್ನು ಕುಡಿಯಿರಿ’ ಮೇಜಿನ ಮೇಲಿದ್ದ ಹಣ್ಣಿಯ ರಸವನ್ನು ಅವರ ಮುಂದೆ ಹಿಡಿದ. ಮರು ಮಾತಾಡದೆ ಅದನ್ನು ಹೀರಿದರು. ಕಣ್ಣುಗಳು ಕೊಳಗಳಾಗಿದ್ದವು.

‘ನಿಂಗೆ ವಿಷ್ಯ ಗೊತ್ತಿಲ್ಲವೆ?’

‘ಯಾವ ವಿಷ್ಯ?’

‘ಇವ್ರು ಕಾಣೆಯಾಗಿದ್ದಾರೆ. ಮಗಳ ಕಣ್ಮರೆಯ ಹಿಂದೆ ಇವರು..’ ಗೋಳೋ ಎಂದು ಅಳಲು ಆರಂಭಿಸಿದರು. ಕಿರಣ ಚಕಿತನಾಗಿ ಕುಳಿತ!

ಹಣ್ಣಿನ ತಂಪು ಪಾನೀಯ ಗುಟುಕರಿಸಿದ ಕಾಶಮ್ಮನ ಮುಖದಲ್ಲಿ ಚೇತರಿಕೆ ಕಂಡಿತು. ನಿಸ್ತೇಜಕವಾಗಿದ್ದ ಕಣ್ಣುಗಳನ್ನು ತೆರೆದು ಕಿರಣನನ್ನು ದಿಟ್ಟಿಸಿದವರು ಅವನ ಕೈಯನ್ನು ಹಿಡಿದರು. ಏನೋ ಹೇಳುವ ತವಕ ಅವರ ತುಟಿಗಳಲ್ಲಿ ಸ್ಪಷ್ಟವಾಗಿ ಮೂಡಿತ್ತು. ಕಿರಣ ತಾನೇ ಏನಲ್ಲವನ್ನು ಕೇಳಬೇಕೆಂದು ನಿರ್ಧರಿಸಿರುವುದರಿಂದ ಅವರ ಮಾತುಗಳನ್ನು ಕೇಳಿದ ಮೇಲೆಯೇ ತನ್ನ ಮನದಲ್ಲಿ ಮೂಡಿದ್ದ ಪ್ರಶ್ನೆಗಳನ್ನು ಕೇಳಬೇಕೆಂದುಕೊಂಡ.

ಅವರು ಕೇಳಲಿಚ್ಛಿಸುವುದು ಏನನ್ನು? ತನ್ನ ದೂರದ ಸಂಬಂಧಿ ಕಾಕುಟ್ಟನ ಮೇಲೆ ವಿಶೇಷ ಅಭಿಮಾನವನ್ನಿಟ್ಟಿರುವ ಹೆಂಗಸು ಯಾವ ವಿಷಯ ಹೇಳಿತು? ಪ್ರಶ್ನೆಗಳು ಎದುರಾದಂತೆ ಕಿರಣ ಸುಮ್ಮನಾದ ಆಕೆಗೆ ಮಾತಾಡಲು ಅವಕಾಶ ಕೊಟ್ಟಂತೆ. ಅವರನ್ನೇ ನೋಡಿದ.

‘ಕಿರಣ’ ಆಪ್ಯಾಯಮಾನವಾಗಿತ್ತು ಕರೆ.

‘ಜೀವನವೇ ಬೇಡ ಅನ್ನುವಂತಾಗಿದೆ. ಎರಡು ದಿವಸದಿಂದಲೂ ಅನ್ನ ನೀರು ಮುಟ್ಟಿಲ್ಲ ನಾನು. ನನ್ನ ಜೊತೆಗೆ ಮಾತನಾಡಲೂ ಯಾರೂ ಇಲ್ಲ. ಒಂಟಿತನ ನನ್ನ ಸಾಯಿಸ್ತಾ ಇದೆ. ಲಹರಿನೂ ಇನ್ನೂ ಪತ್ತೆಯಾಗಿಲ್ಲ. ಒಂದು ರೀತಿಯಲ್ಲಿ ನಾನು ಮಾನಸಿಕವಾಗಿ ನೊಂದಿದ್ದೀನಿ, ಕಿರಣ’ ಕಣ್ಣುಗಳು ರೋಗಿಷ್ಟೆಯಂತೆ ನೀರು ಸುರಿಸಿದವು. ಕಿರಣನ ಕೈ ಬಿಟ್ಟು ಸೆರಗಿನಿಂದ ಕಣ್ಣುಗಳನ್ನು ಒತ್ತಿಕೊಂಡರು.

ಕಿರಣ ಕಾಶಮ್ಮನ ಬೇನೆಯನ್ನು ಅರಿತುಕೊಂಡ.

‘ಯಾಕೆ ಅನ್ನ ನೀರು ಬಿಟ್ಟು ಸಾಯೋ ನಿರ್ಧಾರಕ್ಕೆ ಬಂದ್ರಿ, ಕಾಶಮ್ಮ? ಅದರಿಂದ ಲಾಭ ಆಗೋದಾದ್ರೂ ಯಾರಿಗೆ?’

ತೇವಗೊಂಡ ಕಣ್ಣುಗಳನ್ನು ಮತ್ತೊಮ್ಮೆ ಒರೆಸುವ ಪ್ರಯತ್ನ ಮಾಡಲಿಲ್ಲ ಆಕೆ. ಎರಡು ದಿನ ಅನ್ನ ನೀರು ಮುಟ್ಟದಿರುವುದಕ್ಕೆ ಆಕೆ ಈ ಸ್ಥಿತಿಗೆ ತಲುಪಿದ್ದಾಳೆ.

‘ನಾನು ಪಂಜರದ ಪಕ್ಷಿಯಾಗಿದೀನಿ. ಪಂಜರದ ಬಾಗಿಲು ತೆರೆದ್ರೂನು ಹೊರಗೆ ಹಾರೋದು ಕಷ್ಟ ನನಗೆ. ರೆಕ್ಕೆಗಳಲ್ಲಿ ಬಲವೇ ಇಲ್ಲ’ ಆಶಯ ಪ್ರಕಟವಾಯಿತು.

‘ನನ್ನ ಪ್ರಶ್ನೆಗೆ ಇದು ಸಮಂಜಸ ಉತ್ತರ ಅಲ್ಲ, ಕಾಶಮ್ಮ. ನೀವು ಸಾಯೋ ನಿರ್ಧಾರಕ್ಕೆ ಯಾಕೆ ಬಂದ್ರಿ?’

‘ಅದನ್ನೇ ಹೇಳ್ತಾ ಇದ್ದೀನಿ. ನಾನು ಬಂಧನದಲ್ಲಿದ್ದೀನಿ. ಹೊರಗೆ ಏನು ನಡೆಯುತ್ತೆ ಅನ್ನೋದು ನನಗೆ ಗೊತ್ತಿಲ್ಲ. ಇವ್ರು ಹೈದರಾಬಾದ್‌ಗೆ ಹೋದೋರ ಪತ್ತೆನ ಇಲ್ಲ. ನಂಗ್ಯಾಕೋ ಭಯವಾಗ್ತಿದೆ. ಈ ಹುಡುಗಿ ಕೈಯಲ್ಲಿ ಸಿಕ್ಕಾಕ್ಕೊಂಡು ನರಳ್ತಾ ಇದ್ದೀನಿ’ ಕಾಶಮ್ಮನ ಮಾತು ಒಗಟಿನಂತೆ ಕಂಡಿತು ಕಿರಣನಿಗೆ. ಕಾಶಮ್ಮ ಹೇಳುವ ಹುಡುಗಿ ಯಾರು?

## ಚಳಿ

ನೀ ಬಂದರೆ
ನನ್ನ ಬಳಿ
ತಂಗಾಳಿಯಲ್ಲೂ
ಕೊರೆಯುವ
ಚಳಿ!

★ದೇವಕಿಸುತ



ಈಶ್ವರ